ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 569 (732)

ಉತ್ತರಿಸಬೇಕಾದ ದಿನಾಂಕ : 12-03-2025

ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಸ್ಲಮ್‌ಗಳು ಎಷ್ಟು ಹಾಗೂ ಬೆಂಗಳೂರಿನಲ್ಲಿರುವ ಸ್ಲಮ್‌ಗಳ ಸಂಖ್ಯೆ ಎಷ್ಟು; ಈ ಸ್ಲಮ್‌ಗಳ ನಿರ್ಮೂಲನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯಾದ್ಯಂತ ವಿವಿಧ ಮಹಾನಗರ ಪಾಲಿಕೆ/ನಗರ/ ಪಟ್ಟಣಗಳ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಗೇರಿ ಪ್ರದೇಶ(ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯ್ದೆ, 1973ರಡಿ ಒಟ್ಟು 3019 ಕೊಳಗೇರಿ ಪ್ರದೇಶಗಳನ್ನು ಗುರುತಿಸಲಾಗಿರುತ್ತದೆ. ಇವುಗಳ ಪೈಕಿ ಒಟ್ಟು 2866 ಕೊಳಗೇರಿ ಪ್ರದೇಶಗಳನ್ನು ಘೋಷಿಸಲಾಗಿರುತ್ತದೆ. ಹಾಗೂ ಬೆಂಗಳೂರು ನಗರ ವ್ಯಾಪ್ತಿಯಲ್ಲಿ 433 ಕೊಳಗೇರಿ ಪ್ರದೇಶಗಳನ್ನು ಗುರುತಿಸಲಾಗಿದ್ದು 413 ಕೊಳಚೆ ಪ್ರದೇಶಗಳನ್ನು ನಿಯಮಾನುಸಾರ ಘೋಷಿಸಲಾಗಿರುತ್ತದೆ. **ಅನುಬಂಧ-ಅ ರಲ್ಲಿ** ಒದಗಿಸಲಾಗಿದೆ. |
| (ಆ) | ರಾಜ್ಯದ ಸ್ಲಮ್‌ಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಮತ್ತು ಇತರೇ ಸೌಲಭ್ಯಗಳನ್ನು ಒದಗಿಸಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಸ್ಥಾಪಿಸಿದ್ದು, ಸದರಿ ಮಂಡಳಿ ವತಿಯಿಂದ ಸ್ಲಮ್‌ಗಳ ನಿರ್ಮೂಲನೆಗಾಗಿ ಕಳೆದ 50 ವರ್ಷಗಳಲ್ಲಿ ಕೈಗೊಂಡಿರುವ ಕ್ರಮಗಳೇನು; | ರಾಜ್ಯಾದ್ಯಂತ ಮಹಾನಗರ/ನಗರ/ಪಟ್ಟಣಗಳ ವ್ಯಾಪ್ತಿಯಲ್ಲಿ ಬರುವ ಕೊಳಗೇರಿ ಪ್ರದೇಶಗಳನ್ನು ಘೋಷಿಸಿ, ವಾಸಿಸುತ್ತಿರುವ ನಿವಾಸಿಗಳಿಗೆ ಮೂಲಭೂತ ಸೌಲಭ್ಯ ಕಾಮಗಾರಿಗಳಾದ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪ ಮತ್ತು ಸಮುದಾಯ ಭವನಗಳನ್ನು ನಿರ್ಮಿಸಲಾಗುತ್ತಿದೆ ಹಾಗೂ ಹಾಲಿ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕಚ್ಚಾ-ಗುಡಿಸ್ಲಲುಗಳನ್ನು ತೆರವುಗೊಳಿಸಿ ಅದೇ ಸ್ಥಳದಲ್ಲಿ ವಸತಿ ಕಲ್ಪಿಸಲಾಗುತ್ತಿದೆ (in-situ) ಅಥವಾ ವಾಸಕ್ಕೆ ಯೋಗ್ಯವಲ್ಲದ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳನ್ನು ಸರ್ಕಾರದಿಂದ ಬದಲಿ ಜಮೀನನ್ನು ಪಡೆದು, ಸ್ಥಳಾಂತರಿಸಿ Relocation ಮಾದರಿಯಲ್ಲಿ ಪುನರ್ ವಸತಿ ಕಲ್ಪಿಸಿ ಸ್ಲಂಗಳ ನಿರ್ಮೂಲನೆ ಮಾಡಲು ಕ್ರಮ ವಹಿಸುತ್ತಿದೆ. |
| (ಇ) | ವಸತಿ ಇಲಾಖೆಯ ಕೊಳಗೇರಿ ನಿವಾಸಿಗಳ ಕ್ಷೇಮಾಭಿವೃದ್ಧಿಗಾಗಿ ಯಾವ ಯೋಜನೆಗಳಡಿ ವಸತಿ ಗೃಹಗಳನ್ನು ನೀಡಲಾಗುತ್ತಿದೆ; | **ವಸತಿ ಯೋಜನೆ :** ಕರ್ನಾಟಕ ರಾಜ್ಯಾದ್ಯಂತ ವಿವಿಧ ನಗರ / ಪಟ್ಟಣಗಳ ವ್ಯಾಪ್ತಿಯಲ್ಲಿ ಬರುವ ಆಯ್ದ ಘೋಷಿತ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 2000-2001ನೇ ಸಾಲಿನಿಂದ 2015ನೇ ಸಾಲಿನ ವರೆವಿಗೂ ಕೇಂದ್ರ ಪುರಸ್ಕೃತ ವಿವಿಧ ವಸತಿ ಯೋಜನೆಗಳಡಿ ಒಟ್ಟು 58 ಕೊಳಗೇರಿ ಪ್ರದೇಶಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿ ಕೊಳಚೆ ಮುಕ್ತ ಮಾಡಲಾಗಿದೆ ಹಾಗೂ 382 ಕೊಳಗೇರಿ ಪ್ರದೇಶಗಳಲ್ಲಿ ಕಚ್ಚಾ – ಸೆಮಿಪಕ್ಕ ಮನೆಗಳನ್ನು ತೆರವುಗೊಳಿಸಿ, ಪಕ್ಕ ಮನೆಗಳನ್ನು ನಿರ್ಮಿಸಲಾಗಿದ್ದು, ವಿವರಗಳನ್ನು ಈ ಕೆಳಕಂಡಂತಿವೆ. |

| ಕ್ರ ಸಂ | ಯೋಜನೆ | ವರ್ಷ | ನಿರ್ಮಿಸಿರುವ ಮನೆಗಳ ಸಂಖ್ಯೆ | ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ |
|---|---|---|---|---|
| 1 | ಹುಡ್ಕೋ | 1983-2000 | 30460 | 30460 |
| 2 | ವಾಂಬೆ | 2000-2004 | 34538 | 34538 |
| 3 | ಎಸ್.ಸಿ.ಪಿ. | 1998-1999 | 3080 | 3080 |
| 4 | ಬಿ.ಎಸ್. ಯು.ಪಿ. | 2005-2010 | 24315 | 24315 |
| 5 | ಐ.ಹೆಚ್.ಎಸ್.ಡಿ.ಪಿ | 2005-2010 | 17237 | 17237 |
| 6 | ರಾಜಿವ್ ಆವಾಸ್ ಯೋಜನೆ | 2010-2015 | 19897 | 18967 |
| | **ಒಟ್ಟು** | | **129527** | **128597** |

**ಪ್ರಧಾನ ಮಂತ್ರಿ ಆವಾಸ್ ಯೋಜನೆ-ವಸತಿ ಯೋಜನೆ**

ಪ್ರಸ್ತುತ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ 2015-16ನೇ ಸಾಲಿನಿಂದ 2018-19ನೇ ಸಾಲಿನ ವರೆಗೆ ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ.ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯೊಂದಿಗೆ ಸಮನ್ವಯಗೊಳಿಸಿ ರಾಜ್ಯಾದ್ಯಂತ ನಗರ/ಪಟ್ಟಣ ವ್ಯಾಪ್ತಿಯಲ್ಲಿನ ಕೊಳಗೇರಿ ಪ್ರದೇಶಗಳಲ್ಲಿ ಪಿ.ಎಂ.ವೈ (ನಗರ) -AHP ಘಟಕದಡಿ ಒಟ್ಟು 180253 ಮನೆಗಳ ನಿರ್ಮಾಣಕ್ಕೆ ಕೆಳಕಂಡಂತೆ ವಿವಿಧ ಹಂತಗಳಲ್ಲಿ ಮಂಜೂರಾತಿ ದೊರೆತ್ತಿರುತ್ತದೆ.

| ಕ್ರ ಸಂ | ವರ್ಷ | ಹಂತ | ಕೇಂದ್ರ ಸರ್ಕಾರದ ಅನುಮೋದನೆ ದಿನಾಂಕ | ಮಂಜೂರಾದ ಮನೆಗಳ ಸಂಖ್ಯೆ |
|---|---|---|---|---|
| 1 | 2015-16 | I | 17.03.2016 | 16293 |
| 2 | 2016-17 | II | 11.08.2016 | 9741 |
| 3 | 2017-18 | III | 21.06.2017 | 49368 |
| 4 | 2017-18 | IV | 30.10.2017 | 768 |
| | 2017-18 | V | 27.12.2017 | 6949 |
| 5 | 2018-19 | VI | 28.11.2018 | 2024 |
| | | VII | 27.12.2018 | 55237 |
| | | VII | 25.02.2019 | 39873 |
| | **Total** | | | **180253** |

ಪ್ರಧಾನ ಮಂತ್ರಿ ಆವಾಸ್ ಯೋಜನೆ(ನಗರ)-AHP ಘಟಕದಡಿ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವ,ತಿಯಿಂದ ಅನುಷ್ಠಾನಗೊಳಿಸಲು ಮಂಜೂರಾತಿಯಾಗಿದ್ದ 180253 ಮನೆಗಳ ಪೈಕಿ 118359 ಮನೆಗಳನ್ನು ಮಾತ್ರ ನಿರ್ಮಿಸಲು ಹಾಗೂ ಪ್ರಾರಂಭಿಸದೇ ಇದ್ದ ಮನೆಗಳನ್ನು ಕಡಿತಗೊಳಿಸಲಾಗಿತ್ತು. ಈ ಪೈಕಿ 2024ನೇ ಮಾರ್ಚ್ ಮಾಹೆಯಲ್ಲಿ ಮೊದಲನೇ ಹಂತದಲ್ಲಿ 36789 ಮನೆಗಳನ್ನು ನಿರ್ಮಿಸಿ, ಹಂಚಿಕೆ ಮಾಡಲಾಗಿರುತ್ತದೆ. ಎರಡನೇ ಹಂತದಲ್ಲಿ 39843 ಮನೆಗಳನ್ನು ಮಾರ್ಚ್–2025 ಅಂತ್ಯಕ್ಕೆ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ. ಒಟ್ಟಾರೆಯಾಗಿ ಇಲ್ಲಿಯವರೆವಿಗೂ 76,632 ಮನೆಗಳನ್ನು ನಿರ್ಮಿಸಲಾಗಿರುತ್ತದೆ. ಬಾಕಿ 41,727 ಮನೆಗಳ ನಿರ್ಮಾಣ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ಈ ಮನೆಗಳನ್ನು ಹಂತ-ಹಂತವಾಗಿ ಪೂರ್ಣಗೊಳಿಸಿ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಲು ಕ್ರಮ ವಹಿಸಲಾಗುತ್ತಿದೆ.

ಸದರಿ ಮನೆಗಳಿಗೆ ಫಲಾನುಭವಿ ವಂತಿಕೆ ಪಾಲಿನಲ್ಲಿ ಗರಿಷ್ಟ 1.00 ಲಕ್ಷಗಳನ್ನು ಮಾತ್ರ ಸಂಗ್ರಹಿಸಿ ಉಳಿದ ಫಲಾನುಭವಿ ವಂತಿಕೆ ಮೊತ್ತವನ್ನು ಸರ್ಕಾರದಿಂದ ಭರಿಸಲಾಗುತ್ತಿದೆ. ಕಡಿತಗೊಳಿಸಲಾಗಿದ್ದ 61894 ಮನೆಗಳನ್ನು ಪುನರ್ ಪ್ರಾರಂಭಿಸಲು ಸಚಿವ ಸಂಪುಟವು ದಿನಾಂಕ: 16-1-2025 ರಂದು ಅನುಮೋದನೆ ನೀಡಿದ್ದು, ಆದೇಶ ಹೊರಡಿಸಲು ಕ್ರಮವಹಿಸಲಾಗುತ್ತಿದೆ.

ವಿಧಾನ ಸಭಾ ಕ್ಷೇತ್ರವಾರು ಮತ್ತು ಯೋಜನಾವಾರು ಸಂಪೂರ್ಣ ಮಾಹಿತಿಗಳನ್ನು **ಅನುಬಂಧ–ಆ ರಲ್ಲಿ** ಒದಗಿಸಿದೆ.

**ಮೂಲಸೌಕರ್ಯ ಕಾಮಗಾರಿ-ಕೊಳಗೇರಿ ಸುಧಾರಣೆ ಯೋಜನೆ:-**

ಕೊಳಗೇರಿಗಳಲ್ಲಿ ಮೂಲ ಸೌಕರ್ಯ ಒದಗಿಸಲು ಸರ್ಕಾರವು ಆಯವ್ಯದಲ್ಲಿ ಕೊಳಗೇರಿ ಸುಧಾರಣೆ ಯೋಜನೆಯಡಿ ಒದಗಿಸುವ ಅನುದಾನಕ್ಕನುಗುಣವಾಗಿ ಕ್ರಿಯಾ ಯೋಜನೆ

ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕೊಳಗೇರಿ ಪ್ರದೇಶಗಳಲ್ಲಿ ಭಾಗಶಃ ಮೂಲಭೂತ ಸೌಲಭ್ಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ನಿರ್ವಹಿಸಲಾಗಿರುತ್ತದೆ. ವರ್ಷವಾರು ಮಂಜೂರಾದ ಅನುದಾನದ ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ | ವರ್ಷ | ಆಯವ್ಯಯದಲ್ಲಿ ಒದಗಿಸಿದ ಅನುದಾನ (ಕೋಟಿಗಳಲ್ಲಿ) |
|---|---|---|
| 1 | 2015-16 | 92.15 |
| 2 | 2016-17 | 92.50 |
| 3 | 2017-18 | 142.50 |
| 4 | 2018-19 | 64.60 |
| 5 | 2019-20 | 56.25 |
| 6 | 2020-21 | 65.00 |
| 7 | 2021-22 | 34.00 |
| 8 | 2022-23 | 100.00 |
| 9 | 2023-24 | 50.00 |
| 10 | 2024-25 | 30.00 |
| | **ಒಟ್ಟು** | **727.00** |

| | | |
|---|---|---|
| ಈ) | ಸದರಿ ಯೋಜನೆಗಳಡಿ ವಸತಿ ಗೃಹಗಳನ್ನು ಪಡೆದುಕೊಂಡು ವಸತಿ ಗೃಹವನ್ನು ಇತರರಿಗೆ ಬಾಡಿಗೆ/ಗುತ್ತಿಗೆ ರೂಪದಲ್ಲಿ ನೀಡಿ ಮತ್ತೆ ಕೊಳಗೇರಿ ಸ್ಥಳಗಳಲ್ಲಿ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು? | ಮಂಡಳಿ ವತಿಯಿಂದ ವಿವಿಧ ವಸತಿ ಯೋಜನೆಯಡಿ ಹಾಲಿ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳ ಕಚ್ಚಾ – ಸೆಮಿಪಕ್ಕಾ / ಗುಡಿಸಲುಗಳನ್ನು ತೆರವುಗೊಳಿಸಿ ಅದೇ ಸ್ಥಳದಲ್ಲಿ ಮನೆಗಳನ್ನು (In-situ) ಮಾದರಿಯಲ್ಲಿ ನಿರ್ಮಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ.<br><br>ಮಂಡಳಿಯ ಕಾಯ್ದೆ ಹಾಗೂ ನಿಯಮಗಳನ್ವಯ ಮಂಡಳಿ ವತಿಯಿಂದ ಕೊಳಗೇರಿ ಪ್ರದೇಶಗಳಲ್ಲಿ ವಾಸಕ್ಕೆ ಯೋಗ್ಯವಲ್ಲದ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಸರ್ಕಾರದಿಂದ ಬದಲಿ ಜಾಗವನ್ನು ಪಡೆದು ವಿವಿಧ ವಸತಿ ಯೋಜನೆಯಡಿ Relocation ಮಾದರಿಯಲ್ಲಿ ಪುನರ್ ವಸತಿ ಕಲ್ಪಿಸಿ, ಸರ್ಕಾರದ ಆದೇಶದಲ್ಲಿ ರಚಿಸಲ್ಪಟ್ಟ ಸಮಿತಿಗಳಿಂದ ಅಂತಿಮಗೊಳಿಸಲಾದ ಫಲಾನುಭವಿಗಳ ಪಟ್ಟಿಯನ್ನು ಮಂಡಳಿ ಸಭೆಯಲ್ಲಿ ಮಂಡಿಸಿ, ತದನಂತರ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಲಾಗುತ್ತಿದೆ.<br><br>ವಸತಿ ಯೋಜನೆಗಳಡಿ ವಸತಿ ಗೃಹಗಳನ್ನು ಪಡೆದುಕೊಂಡು ಇತರರಿಗೆ ಬಾಡಿಗೆ/ಗುತ್ತಿಗೆ ರೂಪದಲ್ಲಿ ನೀಡಿರುವ ಪ್ರಕರಣಗಳಲ್ಲಿನ ದೂರುಗಳನ್ವಯ ಖುದ್ದು ಸ್ಥಳ ಪರಿವೀಕ್ಷಣೆ ಮಾಡಿ, ಸಂಬಂಧಪಟ್ಟ ನಿವಾಸಿಗಳನ್ನು ಪರಿಶೀಲನೆಗೊಳಪಡಿಸಿ ತದನಂತರ ನೋಟೀಸ್ ಜಾರಿಗೊಳಿಸಿ, ವಿಷಯವನ್ನು ಮಂಡಳಿ ಸಭೆಯ ಗಮನಕ್ಕೆ ತಂದು ರದ್ದುಪಡಿಸುವ ಬಗ್ಗೆ ಕ್ರಮ ವಹಿಸಲಾಗುವುದು. |

ಸಂಖ್ಯೆ: ವಇ 24 ಎಸ್‌ಬಿಎಂ 2025

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

ಅನುಬಂಧ 'ಅ'

# ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

## ರಾಜ್ಯಾದ್ಯಂತ ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ

| ಕ್ರ.ಸಂ | ಜಿಲ್ಲೆ ಹೆಸರು | ಒಟ್ಟು ಕೊಳಚೆ ಪ್ರದೇಶಗಳ ಸಂಖ್ಯೆ | ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ | ಗುರುತಿಸಿರುವ ಕೊಳಚೆ ಪ್ರದೇಶಗಳ ಸಂಖ್ಯೆ |
|---|---|---|---|---|
| 1 | ಬೆಂಗಳೂರು ನಗರ | 433 | 413 | 20 |
| 2 | ಬೆಂಗಳೂರು ಗ್ರಾಮಾಂತರ | 33 | 33 | 0 |
| 3 | ಬಾಗಲಕೋಟೆ | 104 | 104 | 0 |
| 4 | ಬಳ್ಳಾರಿ | 92 | 89 | 3 |
| 5 | ಬೆಳಗಾವಿ | 250 | 194 | 56 |
| 6 | ಬೀದರ | 68 | 68 | 0 |
| 7 | ಚಿಕ್ಕಬಳ್ಳಾಪುರ | 44 | 44 | 0 |
| 8 | ಚಿಕ್ಕಮಗಳೂರು | 54 | 54 | 0 |
| 9 | ಚಿತ್ರದುರ್ಗ | 69 | 64 | 5 |
| 10 | ಚಾಮರಾಜನಗರ | 68 | 67 | 1 |
| 11 | ದಾವಣಗೆರೆ | 80 | 80 | 0 |
| 12 | ಧಾರವಾಡ | 133 | 133 | 0 |
| 13 | ದಕ್ಷಿಣ ಕನ್ನಡ | 26 | 23 | 3 |
| 14 | ಗದಗ | 102 | 87 | 15 |
| 15 | ಹಾಸನ | 105 | 105 | 0 |
| 16 | ಹಾವೇರಿ | 107 | 103 | 4 |
| 17 | ಕಲಬುರಗಿ | 149 | 148 | 1 |
| 18 | ಕೊಡಗು | 10 | 10 | 0 |
| 19 | ಕೋಲಾರ | 61 | 61 | 0 |
| 20 | ಕೊಪ್ಪಳ | 45 | 45 | 0 |
| 21 | ಮಂಡ್ಯ | 74 | 56 | 18 |
| 22 | ಮೈಸೂರು | 115 | 114 | 1 |
| 23 | ರಾಯಚೂರು | 82 | 82 | 0 |
| 24 | ರಾಮನಗರ | 55 | 51 | 4 |
| 25 | ಶಿವಮೊಗ್ಗ | 165 | 164 | 1 |
| 26 | ತುಮಕೂರು | 130 | 127 | 3 |
| 27 | ಉತ್ತರ ಕನ್ನಡ | 49 | 41 | 8 |
| 28 | ಉಡುಪಿ | 17 | 17 | 0 |
| 29 | ವಿಜಯಪುರ | 139 | 129 | 10 |
| 30 | ವಿಜಯನಗರ | 111 | 111 | 0 |
| 31 | ಯಾದಗಿರಿ | 49 | 49 | 0 |
| | **ಒಟ್ಟು** | **3019** | **2866** | **153** |



File No. DOH/24/SBM/2025-HSD 2-Housing SECRETARIAT (Computer No. 1711707)

Scanned with OKEN Scanner

## [illegible]ಯಿಂದ ವಿವಿಧ ವಸತಿ ಯೋಜನೆಗಳನ್ನು ಅನುಷ್ಠಾನಗೊಳಿಸಿ, ಹಂಚಿಕೆ ಮಾಡಿರುವ ಮನೆಗಳ ವಿವರ

| ಕ್ರ.ಸ | ಯೋಜನೆ | ನಿರ್ಮಿಸಿರುವ/ ನಿರ್ಮಿಸಲಾಗಿರುವ ಮನೆಗಳ ಸಂಖ್ಯೆ | ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ |
|---|---|---|---|
| 1 | ಹುಡ್ಕೋ ವಸತಿ ಯೋಜನೆ (1983-2000) | 30460 | 30460 |
| 2 | ವಾಂಬೇ ವಸತಿ ಯೋಜನೆ(2000-2004) | 34538 | 34538 |
| 3 | ಎಸ್.ಸಿ.ಪಿ. ವಸತಿ ಯೋಜನೆ(1998-99) | 3080 | 3080 |
| 4 | ನರ್ಮ್-ಬಿ.ಎಸ್.ಯು.ಪಿ. (2005-2010) | 24315 | 24315 |
| 5 | ನರ್ಮ್-ಐ.ಹೆಚ್.ಎಸ್.ಡಿ.ಪಿ (2005-2010) | 17237 | 17237 |
| 6 | ರಾಜೀವ್ ಆವಸ್ ಯೋಜನೆ (2010-2015) | 19897 | 18967 |
| | **ಒಟ್ಟು** | **129527** | **128597** |
| 7 | ಪ್ರಧಾನಮಂತ್ರಿ ಆವಾಸ್ ಯೋಜನೆ (2015-2022) | 1,80,253 * | 36789 |
| | **ಒಟ್ಟಾರೆ** | **3,09,780** | **1,65,386** |

AEE, KSDB, Bangalore



Scanned with OKEN Scanner

File No. DOH/24/SBM/2025-HSD 2-Housing SECRETARIAT (Computer No. 1711707)